<u>ದಿನಾಂಕ : 05/01/2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**ಮುಂದುವರೆದ ಪಾಟೀ ಸವಾಲು :ಶ್ರೀ ಕೆ.ಬಿ ವಕೀಲರಿಂದಃ**

ವಾದಿಯರು ಚಂದ್ರಕಾಂತ ಮತ್ತು ನಾಗಪ್ಪ ಇಬ್ಬರು ಸ್ವಂತ ಅಣ್ಣತಮ್ಮಂದಿರು ಅಂದರೆ ಇದ್ದಿರಬಹುದು ನಮ್ಮ ಮನೆ ಬೆರೆ ಕಡೆ ಇದೆ ಅಂತ ಸಾಕ್ಷಿ ಹೇಳುತ್ತಾರೆ . ವಾದಿಯರು ಇಬ್ಬರು ಸಿದ್ದಲಿಂಗಪ್ಪನ ಮಕ್ಕಳು ಅಂದರೆ ನನಗೆ ಗೊತ್ತಿಲ್ಲ. ನಮ್ಮ ಮನೆ ಮತ್ತು ವಾದಿಯರ ಮನೆ ನಮ್ಮ ಮನೆ ಊರಲ್ಲಿ ಕಡೆ ಮನೆ ಇರುತ್ತದೆ. ನಮ್ಮ ಊರಲ್ಲಿ ಎಷ್ಟು ಮನೆಗಳು ಇವೆ ಅಂತ ನನಗೆ ಗೊತ್ತಿಲ್ಲ. ದಾವಾ ಜಮೀನು ವಾದಿಯರಿಗೆ ಅವರ ಹಿರಿಯರಿಂದ ಬಂದಿದೆ ಅಂದರೆ ನನಗೆ ಗೊತ್ತಿಲ್ಲ. ವಾದಿಯರು ಸರ್ವೆ ನಂಬರ 147/2 ರಲ್ಲಿ 1 ಎಕರೆ 13 ಗುಂಟೆ ಮಾಲೀಕರು ಇರುತ್ತಾರೆ ಅಂದರೆ ನನಗೆ ಗೊತ್ತಿಲ್ಲ.

ಸರ್ವೆ ನಂಬರ 147/2 ರಲ್ಲಿಸರ್ಕಾರವು ಉರ್ದು ಶಾಲೆಯಗೊಸ್ಕರ 2.08 ಎಕರೆ ಜಮೀನನ್ನು ಸರಕಾರಿ ಉರ್ದು ಶಾಲೆ ಸಲುವಾಗಿ ಭೂ ಸ್ವಾಧಿನ ಮಾಡಿಕೊಂಡಿದ್ದಾರೆ ಅಂದರೆ ಸರಿ. ಸಾಕ್ಷಿಯು ಶಾಲೆಯನ್ನು ಕಟ್ಟಿದ್ದಾರೆ ಅಂತ ಹೇಳುತ್ತಾರೆ. 2 ಎಕರೆ 8 ಗಂಟೆ ಸರಕಾರಿ ಶಾಲೆಗೆ ಜಮೀನು ಹೋದ ನಂತರ 1 ಎಕರೆ 8 ಗುಂಟೆ ಜಮೀನು ವಾದಿಯರದು ಇರುತ್ತದೆ ಅಂದರೆ ನನಗೆ ಗೊತ್ತಿಲ್ಲ.

ವಾದಿಯರು ನನ್ನ ಮೇಲೆ ಮತ್ತು ಪ್ರತಿವಾದಿ 2 ರಿಂದ 7 ರವರ ಮೇಲೆ ಮನಯ ಆದೇಶ ಕೋರಿ ಭಾಲ್ಕಿ ಜೆಎಮಎಫಸಿ ನ್ಯಾಯಾಲಯದಲ್ಲಿ ದಾವೆ ಹಾಕಿದ್ದಾರೆ ಅಂದರೆ ಗೊತ್ತಿಲ್ಲ. ಆ ಕೇಸನಲ್ಲಿ ನಾನು ವಕೀಲರನ್ನು ನೇಮಿಸಿ ಸಾಕ್ಷ ನೀಡಿರುತ್ತೆನೆ ಅಂದರೆ ಗೊತ್ತಿಲ್ಲ. ಆ ಕೇಸನಲ್ಲಿ ವಾದಿಯು ಸಹ ಸಾಕ್ಷಿ ಜವಾಬ ಮಾಡಿಸಿ ಕೇಸು ಓ ಎಸ 5/2005 ಕಿರಿಯ ಶ್ರೇಣಿ ಭಾಲ್ಕಿ ನ್ಯಾಯಾಲಯದಲ್ಲಿ ವಾದಿಯಂತೆ 11/10/2006 ರಲ್ಲಿ ಡಿಕ್ರಿಯಾಗಿರುತ್ತದೆ ಅಂದರೆ ನನಗೆ ಗೊತ್ತಿಲ್ಲ.

ಸದರಿ ತೀರ್ಪಿನ ವಿರುದ್ದ ಆರ್.ಎ 34/2006 ಅಪೀಲು ಮಾಡಿದ್ದೇನೆಂದರೆ ಸರಿ . ಸದರಿ ಅಪೀಲು ದಿಃ01/02/2008 ರಲ್ಲಿ ವಜಾಆಗಿರುತ್ತದೆ ಅಂದರೆ ನನಗೆ ಗೊತ್ತಿಲ್ಲ.

ನಾನು ರಾಜಪ್ಪ ಅವರ ಹತ್ತಿರ ಖರೀದಿಸಿದ ಜಮೀನು ಸರ್ವ ನಂಬರ 147. ಸರ್ವ ನಂಬರ 147 21 ಗಜ ಉದ್ದ 12 ಗಜ ಅಗಲ ಹಾದಿಯನ್ನು ಬಿಟ್ಟು ಪ್ಲಾಟು ಇರುತ್ತದೆ. 400 450 ರೂಗೆ ಖರೀದಿಸಿದ್ದೆನೆ. ಕಾಗದ ಮಾಡಿಕೊಂಡಿರುತ್ತೆನೆ. ಕಾಗದವನ್ನು ಪಂಚಾಯತಿಯಲ್ಲಿ ಬರೆದಿರುತ್ತಾರೆ. ರಾಜಪ್ಪ ಖರೀದಿ ಮಾಡಿದ ಕಾಗದವನ್ನು ನನಗೆ ಕೊಟ್ಟಿರುತ್ತಾನೆ. ನಾನು 50 ವರುಷದ ಹಿಂದೆ ಖರೀದಿಸಿದ್ದೆನೆ ಸಾಕ್ಷಿಯು ಯಾರುಇರುತ್ತಾರೆ ಅಂತ ನೆನಪಿಲ್ಲ. ಖರೀದಿ ಪತ್ರದಲ್ಲಿ ಅಳತೆಯನ್ನು ಬರೆದಿರುತ್ತೆವೆ. ಪೂರ್ವಕ್ಕೆ ಹಳ್ಳ ಇದೆ, ಪಶ್ಚಿಮಕ್ಕೆ ರಾಜಪ್ಪನದು ಇತ್ತು ನಂತ ಸ್ವಾಮಿಗಳು ತೆಗೆದುಕೊಂಡಿದ್ದರು ನಂತರ ನಾನೇ ತೆಗದುಕೊಂಡಿರುತ್ತೆನೆ. ಉತ್ತರಕ್ಕೆ ಉರ್ದು ಶಾಲೆ ಇದೆ. ದಕ್ಷಿಣಕ್ಕೆ ರಾಜಪ್ಪ ಶೇರಿಕಾರ ಇವರ ಜಮೀನು ಇದೆ. ರಾಜಪ್ಪನ ಕಡೆಯಿಂದ ಖರೀದಿಸಿದ ಕಾಗದಪತ್ರವನ್ನು ಕೊರ್ಟಗೆ ಕೊಟ್ಟಿರುತ್ತಿರಾ ಅಂದರೆ ನಾನು ನಮ್ಮ ವಕೀಲರಿಗೆ ಕೊಟ್ಟಿರುತ್ತೆನೆ. ವಿಜಯಕುಮಾರ ಸ್ವಾಮಿ ಅವರ ಕಡೆಯಿಂದ ತೆಗೆದುಕೊಂಡ ಪ್ಲಾಟು ಯಾವ ವರುಷ ತೆಗೆದುಕೊಂಡಿರುತ್ತೆನೆ ಅಂತ ನೆನಪಿಲ್ಲ. ರಾಜಪ್ಪನಿಂದ ಖರೀದಿ ಮಾಡಿದ 3 ವರುಷಗಳ ನಂತರ ನಾನು ವಿಜಯಕುಮಾರ ಸ್ವಾಮಿ ಅವರ ಕಡೆಯಿಂದ ಪ್ಲಾಟನ್ನು 1,250/- ರೂಗೆ ಖರೀದಿ ಮಾಡಿರುತ್ತೆನೆ. ಖರೀದಿ ಪತ್ರವನ್ನು ಪಂಚಾಯತಿಯಲ್ಲಿ ಬರೆದಿರುತ್ತಾರೆ. ಖರೀದಿ ಕಾಗದ ಪಂಚಾಯತಿಯಲ್ಲಿ ಇಟ್ಟುಕೊಂಡಿರುತ್ತಾರೆ.ಮತ್ತೊಂದು ಕಾಗದವನ್ನು ಪಂಚಾಯತಿಯವರು ಮಾಡಿಕೊಟ್ಟಿರುತ್ತಾರೆ. ನಾವು ನಮ್ಮ ಕಾಗದಗಳನ್ನು ನಮ್ಮ ವಕೀಲರಿಗೆ ಕೊಟ್ಟಿರುತ್ತೆವೆ.

ಸದರಿ ನಾವು ಖರೀದಿಸಿದ ಜಾಗ ಕೃಷಿಯೇತರ ಜಮೀನು ಪರಿವರ್ತನೆ ಆಗಿಲ್ಲ. ಪಂಚಾಯತಿಯಲ್ಲಿ ನಾವು ದುಡ್ಡು ಕೊಟ್ಟು ಮ್ಯೂಟೆಷನ ದಾಖಲು ಮಾಡಿಕೊಂಡಿರುತ್ತೆವೆ. ರಾಜಪ್ಪನ ಕಡೆಯಿಂದ ಖರೀದಿ ತೆಗೆದುಕೊಂಡ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಸರ್ವೆ ನಂಬರ 147 ರಲ್ಲಿ ರಾಜಪ್ಪ ಮಾಲಿಕನಿರಲಿಲ್ಲ ಆದ್ದರಿಂದ ನಾವು ಮಾಲೀಕ ಇಲ್ಲ ಅಂದರೆ ಸರಿಯಲ್ಲ. ವಾದಿಯರು ತಮ್ಮ ಜಮೀನು ಸರ್ವೆ ಮಾಡಲು ಅರ್ಜಿ ಕೊಟ್ಟಿರುತ್ತಾರೆ ಸಾಕ್ಷಿಯು 50 ವರುಷದ ಹಿಂದೆ ಖರೀದಿಸಿದ್ದೆನೆ.

ಸರ್ವ ನಂಬರ 147 ಅಳತೆ ಮಾಡಲು ಬಂದಾಗ ನಮಗೂ ಮತ್ತು ವಾದಿಗೆ ನೋಟಿಸು ಕೊಡಲು ಬಂದಿದ್ದರು ಅಂದರೆ ಸರಿ . ಆದರೆ ಏನು ಮಾಡಿರುತ್ತಾರೆ ಅಂತ ಗೊತ್ತಿಲ್ಲ. ಸರ್ವೆ ಮಾಡಿದ ನಂತರ ನಾನು ಮತ್ತು ಪ್ರತಿವಾದಿಯರು ಸೇರಿ ನಾನು 4 ಗುಂಟೆ ಉಳಿದ ಪ್ರತಿವಾದಿಯರು 2 ರಿಂದ 7 ರವರು ತಲಾ 2 ಗುಂಟೆ ಜಮೀನನ್ನು ಅತಿಕ್ರಮಣ ಮಾಡಿರುತ್ತಾರೆ ಅಂತ ವರದಿ ಕೊಟ್ಟಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ವಾದಿಯರು ನಮಗೆ ಅತಿಕ್ರಮಣ ಮಾಡಿದ ಜಾಗವು ಬಿಟ್ಟುಕೊಡಿ ಅಂತ ಕೇಳಿದರು ಅಂದರೆ ಸರಿಯಲ್ಲ. ವಾದಿಯರು ನಮಗೆ ಇದು ನಮ್ಮ ಜಾಗ ಇದ್ದು ಇಲ್ಲಿ ಕಟ್ಟಡ ಕಟ್ಟಬೇಡಿ ಅಂತ ಹೇಳಿದ್ದಾರೆ ಅಂದರೆ ಸರಿಯಲ್ಲ. ನಮ್ಮ ಪ್ಲಾಟು ಖರೀದಿಸಿದ ಜಾಗದಲ್ಲಿ ಕಟ್ಟಿಸಿರುತ್ತೆವೆ. ನಾವು ತೆಗೆದುಕೊಂಡಾಗ 4 ಕೋಣೆಗಳನ್ನು ಕಟ್ಟಿರುತ್ತೆವೆ ಪಡಸಾಲೆ ಕಟ್ಟಿರುತ್ತೆವೆ. ಕಟ್ಟಡ ಮಾಡಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಿರಾ ಅಂದರೆ ಸಾಕ್ಷಿಯು ನಾವು ನಮ್ಮ ವಕೀಲರಿಗೆ ಎಲ್ಲ ಕಾಗದಗಳನ್ನು ಕೊಟ್ಟಿರುತ್ತೆವೆ. ರಾಜಪ್ಪನ ಹತ್ತಿರ ತೆಗದುಕೊಂಡ ಜಾಗದಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಅಂದರೆ ಸರಿಯಲ್ಲ. ನಾನು ಖರೀದಿಸಿದ ಪಂಚಾಯತ ದಾಖಲೆಗಳು ಜಾಲಿ ಇರುತ್ತವೆ ಅಂದರೆ ಸರಿಯಲ್ಲ. ಸಾಕ್ಷಿಯು ನಾವು ಕಟ್ಟಡ ಕಟ್ಟಬೇಡಿ ಅಂತ ಹೇಳಿದರೆ ಕಟ್ಟುತ್ತಿರಲಿಲ್ಲ ಅಂತ ಹೇಳುತ್ತಾರೆ. ನಾವು ಖರೀದಿಸಿದ ಜಾಗದ ಪ್ಲಾಟನ ಮಾಲಿಕ ಇರುತ್ತೆನೆ ಅಂತ ಸುಳ್ಳು ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ನಾನು ವಾದಿಯರ ಮೇಲೆ ಕೇಸು ಹಾಕಿಲ್ಲ. ನಾವು ಖರೀದಿಸಿದ ಯಾವ ಪ್ಲಾಟು ನೊಂದಣಿ ಆಗಿಲ್ಲ ಎಲ್ಲ ಪಂಚಾಯತ ದಾಖಲೆಯ ಆಧಾರದ ಮೇಲೆ ಆಗಿರುತ್ತದೆ. ಪಂಚಾಯತದವರು ಅರ್ಜಿ ಕೊಟ್ಟ ನಂತರ ಖರೀದಿಸಿದವರ ಹೆಸರುಗಳನ್ನು ದಾಖಲಿಸಿರುತ್ತಾರೆ. ನಾನು ವಾದಿಯರ ಜಮೀನಿನಲ್ಲಿ ನಾನು 4 ಗುಂಟೆ ಅತಿಕ್ರಮಣ ಮಾಡಿದ್ದೆನೆಂದರೆ ಸರಿಯಲ್ಲ. ಸಾಕ್ಷಿಯು ನಾನು ಖರೀದಿ ಮಾಡಿದ್ದೆನೆ ಅಂತ ಹೇಳುತ್ತಾರೆ. 2016 ರಲ್ಲಿ ವಾದಿಯರು ಜಾಗವನ್ನು ಬಿಟ್ಟುಕೊಡಿ ಅಂತ ಕೇಳಿದ್ದಾರೆ ಅಂದರೆ ಸರಿಯಲ್ಲ. ವಾದಿಯರು ಆದೇ ರೀತಿ ಉಳಿದ ಪ್ರತಿವಾದಿಯರಿಗೂ ನೀವು ಕಟ್ಟಿಕೊಂಡಿದ್ದು ಕೆಡವಿಕೊಂಡು ಬಿಟ್ಟುಕೊಡಿ ಅಂತ ಕೇಳಿದ್ದರು ಅಂದರೆ ಸರಿಯಲ್ಲ. ವಾದಿಯರು ಕೊಡದೆ ಇದ್ದ ಕಾರಣ ದಾವೆ ಹಾಕಿರುತ್ತಾರೆ ಅಂದರೆ ಸರಿಯಲ್ಲ.

ವಾದಿಯರ ಜಮೀನಿನಲ್ಲಿ 4 ಗುಂಟೆ ಅತಿಕ್ರಮಣ ಮಾಡಿದ್ದೆನೆಂದರೆ ಸರಿಯಲ್ಲ. ಕಮಿಷನರ ರಿಪೋರ್ಟ ಪ್ರಕಾರ ಅತಿಕ್ರಮಣ ಮಾಡಿದ್ದೆನೆಂದರೆ ಸರಿಯಲ್ಲ. ಕಮಿಷನರ ರಿಪೋರ್ಟ ಕೊಡುವಾಗ ನಾನು 4 ಗುಂಟೆ ಅತಿಕ್ರಮಣ ಮಾಡಿದ್ದೆನೆ ಅಂತ ಹೇಳಿದಕ್ಕೆ ನಾನು ಕಮಿಷನರ ರಿಪೋರ್ಟಗೆ ಸಹಿ ಮಾಡಿಲ್ಲ ಅಂದರೆ ಸರಿಯಲ್ಲ. ವಾದಿಯರ ಜಾಗವನ್ನು ನುಂಗುವ ದುರದ್ದೆಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ರಾಜಪ್ಪ ಮತ್ತು ವಿಜಯಸ್ವಾಮಿ ಅವರ ತೆಗೆದುಕೊಂಡ ಜಾಗವನ್ನು 2 ಅರ್ಜಿಕೊಟ್ಟಿ ಮಾಡಿಕೊಂಡಿರುತ್ತೆವೆ. ನಾನು ಊಳಿದ ಪ್ರತಿವಾದಿಯರ ಮಾತು ಕೇಳಿ ವಾದಿಯರಿಗೆ ಜಾಗ ಬಿಟ್ಟುಕೊಡಲು ಒಪ್ಪಿಕೊಂಡಿಲ್ಲ ಅಂದರೆ ಸರಿಯಲ್ಲ. ನಾನು ವಾದಿಯರ ಜಾಗೆಯಲ್ಲಿ ಅತಿಕ್ರಮಣ ಮಾಡಿಲ್ಲ ಅಂತ ಸುಳ್ಳು ನುಡಿಯುತ್ತಿದ್ದೆನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತ ಲೇಖನದ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಮೇಲೆ ಟೈಪ್ / ಪ್ರಿಂಟ್ ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಭಾಲ್ಕಿ

ಅಳತೆ ಕಾಲಕ್ಕೆ ಪ್ರತಿವಾದಿ 2 ರಿಂದ 7 ಸಹ ಇದ್ದರು ಅಂದರೆ ಸಾಕ್ಷಿಯು ನಾನು ಇರಲಿಲ್ಲ ಅಂತ ಹೇಳುತ್ತಾರೆ. ದಾವೆ ಅಳತೆ ಕಾಲಕ್ಕೆ ಪ್ರತಿವಾದಿ 2 ರಿಂದ 7 ರವರು ಇದ್ದರು ಅಂದರೆ ಸಾಕ್ಷಿಯು ಇದ್ದರು ನಾನು ಇರಲಿಲ್ಲ ಅಂತ ಸಾಕ್ಷಿ ಹೇಳುತ್ತಾರೆ.

ನಾನು ಅಳತೆ ಮಾಡಿದ ನಂತರ ಅತಿಕ್ರಮಣ ಮಾಡಿದ್ದೆನೆ ಅಂತ ಗೊತ್ತಾದ ನಂತರ ಸದರಿ ಕಮಿಷನರ್ ರಿಪೊರ್ಟಗೆ ಸಹಿ ಮಾಡಲು ನಿರಾಕರಿಸಿದ್ದೆನೆಂದರೆ ಸರಿಯಲ್ಲ. ಸರ್ವೆ ಮಾಡುವುದು ಸರಿ ಇದೆ ತಪ್ಪು ಇದೆ ಅಂದರೆ ಸಾಕ್ಷಿಯು ನನಗೆ ಹೇಳಲು ಬರುವುದಿಲ್ಲ ಅಂತ ಹೇಳುತ್ತಾರೆ.

**ಮುಂದುವರೆದ ಪಾಟೀ ಸವಾಲು ಕಾಲವಕಾಶ ಕೊರಿದ್ದು ಮುಂದೂಡಲಾಯಿತು.**

(ನನ್ನ ಉಕ್ತ ಲೇಖನದ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಮೇಲೆ ಟೈಪ್ / ಪ್ರಿಂಟ್ ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಭಾಲ್ಕಿ

ದಿನಾಂಕ : 09/11/2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಪ್ರತಿವಾದಿ ಪರ ಶ್ರೀ ಎನ್ ಎನ್ ಎಸ ವಕೀಲರಿಂದಃ

3. ರಾಷನ ಕಾರ್ಡನ್ನು ಹಾಜರುಮಾಡಿದ್ದು ನಿಡಿ- 6 ರಿಂದ 8
4 ಆಧಾರಕಾರ್ಡನ್ನು ನಿಡಿ-9 ರಿಂದ 12

ಪಾಟೀ ಸವಾಲುಃವಾದಿ ಪರ ಶ್ರೀ ಸಿಎಸಬಿ ವಕೀಲರಿಂದಃ ಕಾಲವಕಾಶ ಕೊರಿದ್ದು ಮುಂದೂಡಲಾಯಿತು.

(ನನ್ನ ಉಕ್ತ ಲೇಖನದ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಮೇಲೆ ಟೈಪ್ / ಪ್ರಿಂಟ್ ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಭಾಲ್ಕಿ

ದಿನಾಂಕ : 15/11/2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.
**ಪಾಟೀ ಸವಾಲುಃವಾದಿ ಪರ ಶ್ರೀ ಸಿಎಸಬಿ ವಕೀಲರಿಂದಃ**

ನಾನು ಶಾಲೆ ಕಲಿತಿಲ್ಲ. ನನ್ನ ವಯಸ್ಸು ಅಂದಾಜು 80 ಇರಬಹುದು. ನಾವು ಚಿಕ್ಕವರಿದ್ದಾಗ ಶಾಲೆ ಇರಲಿಲ್ಲ. ನಾನು 14 15 ವರುಷದವನು ಇದ್ದಾಗ ನನ್ನ ತಂದೆ-ತಾಯಿ ತೀರಿಕೊಂಡಿರುತ್ತಾರೆ. ನಮ್ಮ ಅಡ್ಡಹೆಸರು ಬಾರೊಳೆ. ನಮ್ಮ ಪೂರ್ವಜರ ಊರು ಬಾಳೂರು. ನಮ್ಮ ತಂದೆ ರಾಮಚಂದ್ರ ತಳವಾಡ ಎಮ ಗ್ರಾಮದಲ್ಲಿ ವಾಸವಾಗಿದ್ದರು ಅಂದರೆ ಸರಿ . ಬಾಳೂರದಲ್ಲಿ ನಮ್ಮ ತಂದೆಗೆ ಎಷ್ಟು ಜಮೀನು ಇತ್ತು ಅಂತ ಗೊತ್ತಿಲ್ಲ. ಬಾಳೂರದಲ್ಲಿ ನಮ್ಮ ತಂದೆ ಹೆಸರನಲ್ಲಿ ಜಮೀನು ಇತ್ತು ಆದರೆ ನನಗೆ ಗೊತ್ತಿಲ್ಲ. ನಮ್ಮ ತಂದೆಯವರು ಮಾರಾಟ ಮಾಡಿದ್ದಾರೊ ಅಥವಾ ಇಲ್ಲವೊ ಅಂತ ಗೊತ್ತಿಲ್ಲ. ನನ್ನ ತಾಯಿಯ ಹೆಸರು ವಿಠಾಬಾಯಿ. ನಮ್ಮ ತಾಯಿಯ ಊರು ತಳವಾಡ ಎಮ ಗ್ರಾಮ. ನಮ್ಮ ತಂದೆ ಮದುವೆಯಾದ ನಂತರ ನನ್ನ ತಾಯಿಯ ತವರುಮನೆಯಲ್ಲಿ ಮನೆ ಅಳಿಯ ಅಂತ ವಾಸವಾಗಿದ್ದ ಅಂದರೆ ಸರಿ . ನಮ್ಮ ತಂದೆಗೆ ನಾವು ಇಬ್ಬರು ಮಕ್ಕಳು ನಾನು ಮತ್ತು ಸಂಗ್ರಾಮ ಹೆಣ್ಣುಮಕ್ಕಳು ಇಲ್ಲ. ಸಂಗ್ರಾಮ 10, 15 ವರುಷದ ಹಿಂದೆ ತೀರಿಕೊಂಡಿರುತ್ತಾನೆ ಸಂಗ್ರಾಮನಿಗೆ 3 ಜನ ಮಕ್ಕಳು ಅವರ ಹೆಸರು ಗೋವಿಂದ , ಬಾಲಾಜಿ , ಗೋಪಾಲ ಅಂತ ಇರುತ್ತದೆ. ಸಂಗ್ರಾಮನ ಹೆಂಡತಿಯ ಹೆಸರು ಕಸ್ತೂರಿಬಾಯಿ ಅವರು ಜೀವಂತ ಇದ್ದಾರೆ. ತಳವಾಡ ಎಮದಿಂದ ಸೋಮಪೂರ ಸುಮಾರು 2 ರಿಂದ 4 ಕಿ.ಮಿ ದೂರದಲ್ಲಿದೆ. ತಳವಾಡ ಎಮ ಗ್ರಾಮದ ದಕ್ಷಿಣ ದಿಕ್ಕಿಗೆ ಸೋಮಪೂರ ಗ್ರಾಮ ಬರುತ್ತದೆ.

ವಾದಿ ರೆವತಬಾಯಿ ದಾವೆಯನ್ನು ಏಕೆ ಹಾಕಿದ್ದಾರೆ ಅಂತ ಗೊತ್ತಿಲ್ಲ. ಕೊರ್ಟ ಸಮನ್ಸ ಬಂದಾಗ ನಾನು ಮನೆಯಲ್ಲಿ ಇರಲಿಲ್ಲ. ನಾನು ನನ್ನ ಕೈಪೀತ(ಡಬ್ಲೂಎಸ ) ನ ಮೇಲೆ ಸಹಿ ಮಾಡಿರುತ್ತೆನೆ. ನನ್ನ ತಕರಾರಿನಲ್ಲಿ ಏನು ಬರೆದಿರುತ್ತಾರೆ ಅಂತ ಮಾಹಿತಿ ಇದೆಯಾ ಅಂದರೆ ಸಾಕ್ಷಿಯು ಇಲ್ಲ ಅಂತ ಹೇಳುತ್ತಾರೆ. ವಾದಿಯು ದಾವೆಯನ್ನು ಏನು ಅಂತ ಹಾಕಿದ್ದಾರೆ ಅಂತ

ಗೊತ್ತಿಲ್ಲ. ದಾವೆಯ ವಿಚಾರಣೆಯನ್ನು ಪ್ರತಿವಾದಿ 3 ರಾಮ ನೊಡಿಕೊಳ್ಳುತ್ತಾನೆ ಅಂದರೆ ಸರಿ . ದಾವೆಯಲ್ಲಿ ಏನು ತಕರಾರು ಆಗಿರುತ್ತದೆ ಮತ್ತು ಸಾಕ್ಷಿ ಏನು ನೀಡಿರುತ್ತಿರಿ ಅಂತ ನಾನು ಕೇಳಿಲ್ಲ.

ಸಾಕ್ಷಿಗೆ ತನ್ನ ಕೈಪೀತನ್ನು ಓದಿ ತಿಳಿಸಿದ್ದು ಅದರಲ್ಲಿ ಪಾರಾ ನಂಬರ 5 1 ನೇ ವಾದಿ ರೇವತಬಾಯಿಯಿ ಇವರು 2 ನೇ ವಾದಿ ಕಸ್ತೂರಿಬಾಯಿ ಮಗಳು ಅಂತ ಬರೆದಿರುತ್ತದೆ ಅಂದರೆ ಸರಿ. ನನ್ನ ಕೈಪೀತನಲ್ಲಿ ಏನು ಬರೆದಿದೆ ಅಂತ ನನಗೆ ಗೊತ್ತಿಲ್ಲ. ವಾದಿಯು ಏನುದಾವೆ ಹಾಕಿರುತ್ತಾರೆ ಮತ್ತು ಏನು ತಕರಾರು ಹಾಕಿರುತ್ತಾರೆ ಅಂತ ಕೇಳಿಲ್ಲ. ನಾನು ಬೆಳಗ್ಗೆ ಎದ್ದ ನಂತರ ನನ್ನ ಜಮೀನಿಗೆ ಹೊಗುತ್ತೆನೆ.

ಪ್ರತಿವಾದಿ 3 ರಾಮ ಇತನು ನನಗೆ ವಾದಿ ರೇವತಬಾಯಿಯಿ ಏನು ದಾವೆ ಹಾಕಿರುತ್ತಾಳೆ ಏಕೆ ಹಾಕಿರುತ್ತಾಳೆ ಅಂತ ನಾನು ಕೇಳಿಲ್ಲ ಅವನು ಹೇಳಿಲ್ಲ. 2 ನೇ ವಾದಿ ಕಸ್ತೂರಿಬಾಯಿ ಇವಳು ಸೈಯಾಜಿರಾವ ಸೋಮಪೂರ ಅವರ ಮಗಳು ಅಂತ ಬರೆದಿದೆ ಅಂದರೆ ಗೊತ್ತಿಲ್ಲ. 1 ನೇ ವಾದಿ ರೇವತ ಬಾಯಿ ಇವಳ ಮದುವೆಯು ಯಾರ ಜೊತೆ ಆಗಿದೆ ಅಂತ ನನಗೆ ಗೊತ್ತಿಲ್ಲ. ರೇವತಬಾಯಿಯಿ ಮದುವೆಯು ಯಾರ ಜೊತೆ ಆಗಿದೆ ಅಂತ ಹೇಳಿಲ್ಲ. ನನ್ನ ತಕರಾರಿನಲ್ಲಿ ಪೆಜ ನಂಬರ 4 ರಲ್ಲಿ ಪಾರ ನಂಬರ 5 ರಲ್ಲಿ 1 ನೇ ವಾದಿ ರೇವತಾಯಿಯಿ ಇವರ ಮದುವೆಯು ರಾಜಕುಮಾರ ಹಲ್ಲಾಳೆ ಸೋನಾಳವಾಡಿ ತಾಃಔರಾದ ಇವರ ಸಂಗಡ ಮದುವೆಯಾಗಿರುತ್ತದೆ ಅಂತ ಬರೆದಿರುತ್ತದೆ ಅಂದರೆ ನನಗೆ ಗೊತ್ತಿಲ್ಲ. ವಾದಿ ರೇವತಬಾಯಿ ಇವಳು ಹೈದ್ರಾಬಾದನಲ್ಲಿ ಇರುತ್ತಾಳೆ ಅಂತ ಗೊತ್ತು ಆದರೆ ನಾನು ಜವಾಬನಲ್ಲಿ ಹೇಳಿಲ್ಲ.

ನನ್ನ ಮದುವೆಯು 2 ನೇ ವಾದಿ ಕಸ್ತೂರಿಬಾಯಿ ಸಂಗಡ ತಳವಾಡ ಎಮ ಗ್ರಾಮದಲ್ಲಿ ನಮ್ಮ ಮನೆಯ ಮುಂದೆ ಆಗಿದೆ ಅಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಮತ್ತು ಕೈಪೀತನಲ್ಲಿ 2 ನೇ ವಾದಿ ಕಸ್ತೂರಿಬಾಯಿ ಸೈಯಾಜಿರಾವ ಇವರ ಮಗಳು ಅಂತ ಬರೆದಿದ್ದು ಇರುತ್ತದೆ ಅಂದರೆ ನನಗೆ ಗೊತ್ತಿಲ್ಲ. ಕಸ್ತೂರಿಬಾಯಿ ಇವಳು ಮದುವೆಯು ನನ್ನ ತಕರಾರಿನಲ್ಲಿ ಪಾರ ನಂಬರ 5 ಪೆಜ ನಂಬರ 4 ರಲ್ಲಿ ----- ಇವರ ಜೊತೆ ಆಗಿರುತ್ತದೆ ಅಂತ ಬರೆದಿರುತ್ತದೆ

ಅಂದರೆ ನನಗೆ ಗೊತ್ತಿಲ್ಲ.

ವಾದಿಯು ಪ್ರತಿವಾದಿ 2 ರಿಂದ 4 ಇವರ ವಿರುದ್ದ ದಾವೆ ಹಾಕಿದ್ದು 2 ನೇ ಪ್ರತಿವಾದಿಯು ಮಜಲಸಬಾಯಿ 2 ನೇ ಹೆಂಡತಿ ಇರುತ್ತಾಳೆ ಅಂದರೆ ಸಾಕ್ಷಿಯು 2 ನೇ ಪ್ರತಿವಾದಿ ಮಾತ್ರ ನನ್ನ ಹೆಂಡತಿ ಅಂತ ಹೇಳುತ್ತಾರೆ. 2 ನೇ ಪ್ರತಿವಾದಿ ಮಜಲಸಬಾಯಿ 2 ನೇ ಹೆಂಡತಿ ಇರುತ್ತಾಳೆ ಅಂತ ವಾದ ಪತ್ರದಲ್ಲಿ ತೋರಿಸಿದ್ದು ಇರುತ್ತದೆ ಅದರ ಬಗ್ಗೆ ಯಾವುದೇ ಉತ್ತರ ನೀಡಿಲ್ಲ ಅಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಅಂತ ಹೇಳುತ್ತಾರೆ. ವಾದಿ ರೆವತಬಾಯಿ ಯಾವ ಯಾವ ಆಸ್ತಿಯ ಮೇಲೆ ದಾವೆ ಹಾಕಿದ್ದಾಳೆ ಅಂದರೆ ಗೊತ್ತಿಲ್ಲ. ನಾನು ಯಾವತ್ತು ಭಾಲ್ಕಿಗೆ ಬಂದಿಲ್ಲ ಮತ್ತು ಆ ಬಗ್ಗೆ ಕೇಳಿಲ್ಲ . ನಾನು ಸಹಿ ಮಾಡಿದ ಬಗ್ಗೆ ಗೊತ್ತಿಲ್ಲ. ವಾದಿ ರೇವತಬಾಯಿ ವಯಸ್ಸು ಎಷ್ಟು ಇದೆ ಅಂತ ಗೊತ್ತಿಲ್ಲ. ರಾಮನ ವಯಸ್ಸು ಅಂದಾಜು 25 30 ಇರಬಹುದು. ಲಕ್ಷ್ಮಣನ ವಯಸ್ಸು 20 ಇರಬಹುದು. ರಾಮನ ಮದುವೆಯು ತಳವಾಡ ಎಮ ಗ್ರಾಮದಲ್ಲಿಆಗಿದೆ. ರಾಮನ ಹೆಂಡತಿಯ ಹೆಸರು ಅರ್ಚನಾ. ರಾಮನ ಮದುವೆಯ ಸಮಯದಲ್ಲಿ ವಾದಿಯರು ಅವಳ ಗಂಡ ಮದುವೆಗೆ ಬಂದಿದ್ದರು ಅಂದರೆ ಬಂದಿಲ್ಲ ಮತ್ತು ನನಗೆ ಗೊತ್ತಿಲ್ಲ ಅಂತ ಸಾಕ್ಷಿ ಹೇಳುತ್ತಾರೆ. ಲಕ್ಷ್ಮಣನ ಮದುವೆಯ 8 9 ವರುಷ ಆಗಿರುತ್ತದೆ. ಲಕ್ಷ್ಮಣನ ಮದುವೆಯಲ್ಲಿ ರೇವತಬಾಯಿ ಬಂದಿದ್ದಳು ಅಂದರೆ ಗೊತ್ತಿಲ್ಲ. ಬಟ್ಟೆ ತೆಗದುಕೊಂಡ ಬಗ್ಗೆ ಗೊತ್ತಿಲ್ಲ ನಾನು ತೆಗೆದುಕೊಂಡಿಲ್ಲ. ಲಕ್ಷ್ಮಣನ ಮದುವೆಯು ತಳವಾಡ ಎಮ ಗ್ರಾಮದ ಮಾರುತಿ ಮಂದಿರದಲ್ಲಿ ಆಗಿದೆ. ಮದುವೆಯಲ್ಲಿ ರೇವತಾಗೆ ಹಾಗೂ ರಾಜಕುಮಾರಗೆ ಬಟ್ಟೆ ತೆಗೆದುಕೊಂಡಿರುತ್ತಾರೆ ಅಂದರೆ ಸಾಕ್ಷಿಯು ಸುಮ್ಮನಿದ್ದು "ಹೂ" ಅಂತ ಅಂದಿರುತ್ತಾರೆ ನಂತರ ಇಲ್ಲ ಅಂತ ಹೇಳುತ್ತಾರೆ. ಲಕ್ಮಣನ ಮದುವೆಯಲ್ಲಿ 2 ತೊಲ ಬಂಗಾರ ಅಳಿಯ ರಾಜಕುಮಾರ ಬೇಡಿದ್ದರು ಅಂದರೆ ಸಾಕ್ಷಿಯು ನಮಗೇನು ಕೇಳಿಲ್ಲ ಮತ್ತು ಬಂದಿಲ್ಲ ಅಂತ ಹೇಳುತ್ತಾರೆ. ರೇವತಬಾಯಿ ದಾವೆ ಹಾಕಿದ ನಂತರ ಏಕೆ ದಾವೆ ಹಾಕಿರುತ್ತಾಳೆ ಅಂತ ನಾನು ವಿಚಾರಣೆ ಮಾಡಿಲ್ಲ.

ದಾವೆ ಹಾಕುವ ಮೊದಲು ವಾದಿಯರು ತಳವಾಡ ಎಮ.ಗ್ರಾಮಕ್ಕೆ  ಬಂದಿದ್ದರು ಅಂದರೆ ಬಂದಿಲ್ಲ .  ವಾದಿಯರು ಈಗ ಪಾಲು ಕೇಳಿ ದಾವೆ ಹಾಕಿದ್ದಾರೆ ಅಂತ ಗೊತ್ತಾಗಿರುತ್ತದೆ.

ನಮ್ಮ ಮೂಲ ಊರು ಬಾಳೂರದಲ್ಲಿ ಆಸ್ತಿಯನ್ನು ಮಾರಾಟ ಮಾಡಿ ತಳವಾಡ ಎಮ ಗ್ರಾಮದಲ್ಲಿ ಜಮೀನು ಖರೀದಿಸಿದ್ದೆನೆಂದರೆ ಸರಿಯಲ್ಲ. ಸಾಕ್ಷಿಯು ನಾನೇ ಖರೀದಿಸಿದ್ದೆನೆ ಅಂತ ಹೇಳುತ್ತಾರೆ.  ನಾನು ಕೊಟಗಿರಾ ವಿಶ್ವನಾಥ ಇವರ ಹತ್ತಿರ 5 ಎಕರೆ ಜಮೀನನ್ನು ಖರೀದಿ ಮಾಡಿರುತ್ತೆನೆ.  ನನ್ನ ಅಣ್ಣ ಸಂಗ್ರಾಮ ಇತನು ಕೊಟಗಿರಾ ವಿಶ್ವನಾಥ ಇವರ ಹತ್ತಿರ 5 ಎಕರೆ ಜಮೀನು ಖರೀದಿಮಾಡಿರುತ್ತಾನೆ.  ಆ ಸಮಯದಲ್ಲಿ ಪ್ರತಿ ಎಕರೆಗೆ 5 , 6 ಸಾವಿರ ರೂಪಾಯಿ ಬೆಲೆ ಇತ್ತು.  ನಮಗೆ ಮಾರಾಟ ಮಾಡಿದ ವಿಶ್ವನಾಥ ಇತನು ಕೊಟಗಿರಾದಲ್ಲಿರುತ್ತಾರೆ ಅಂದರೆ ಸರಿ .  ಖರೀದಿ ಸಮಯದಲ್ಲಿ ಯಾರುಯಾರು ಇದ್ದರು ಅಂದರೆ ನನಗೆ ಗೊತ್ತಿಲ್ಲ ನಮ್ಮ ಅಣ್ಣನಿಗೆ ಗೊತ್ತು ಅಂತ ಹೇಳುತ್ತಾರೆ.  ಕಸ್ತೂರಿಬಾಯಿ ಅವರ ತಂದೆ ಸೈಯಾಜಿರಾವ ಸೋಮಪೂರ , ನಮ್ಮ ತಮ್ಮ ಸಂಗ್ರಾಮ ಮತ್ತು ಕೊಟಗಿರಾ ವಿಶ್ವನಾಥ ಇವರೆಲ್ಲರೂ ಖರಿದಿ ಕಾಲಕ್ಕೆ ಹಾಜರಿದ್ದು ಸಹಿ ಮಾಡಿರುತ್ತಾರೆ ಅಂದರೆ ಸಾಕ್ಷಿಯು ನಾನು ಸಣ್ಣವನಿದ್ದೆ ನನಗೆ ಗೊತ್ತಿಲ್ಲ ಅಂತ ಹೇಳುತ್ತಾರೆ.  ಸಂಗ್ರಾಮ ಇತನಿಗೆ ಗೊತ್ತು ನನಗೆ ಗೊತ್ತಿಲ್ಲ.  ಸೈಯಾಜಿರಾವ ಸೋಮಪೂರ ಇವರು ತಮ್ಮ ಮಗಳ ಕಸ್ತೂರಿಬಾಯಿು ಮತ್ತು ನನ್ನ (ಅಳಿಯನ)ಸಲುವಾಗಿ ದಾವಾಆಸ್ತಿಯನ್ನು ಖರೀದಿ ಮಾಡಿದ್ದಾರೆ ಅಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಸಂಗ್ರಾಮಗೆ ಗೊತ್ತು ಅಂತ ಹೇಳುತ್ತಾರೆ.  ಖರೀದಿಯನ್ನು ಯಾವಾಗ ಮಾಡಿಕೊಂಡಿರುತ್ತಾರೆ ಅಂತ ನನಗೆ ಗೊತ್ತಿಲ್ಲ.

ಸೈಯಾಜಿರಾವ ಸೋಮಪೂರ ಇವರು ಜೀವಂತ ಇದ್ದಾರೆ ಅಥವಾ ಇಲ್ಲವೊ ಅಂದರೆ ಸಾಕ್ಷಿಯು 8 , 9 ವರುಷಗಳ ಹಿಂದೆ ಮರಣಹೊಂದಿರುತ್ತಾರೆ ಅಂತ ಹೇಳುತ್ತಾರೆ.  ಸಾಕ್ಷಿಯು ಪುನಃ ಹೇಳುವುದೆನೆಂದರೆ ನನಗೆ ಗೊತ್ತಿಲ್ಲ.  5 , 6 ತಿಂಗಳ ಹಿಂದೆ ದ್ರೊಪದಿಬಾಯಿು ತೀರಿಕೊಂಡಿದ್ದಾಳೆ ಅಂದರೆ ಗೊತ್ತಿಲ್ಲ.  ಸೈಯಾಜಿರಾವ ಅವರ ಹಿರಿಯ ಮಗ ದತ್ತು 2 ನೇ ಮಗ ದಿನಕರ .  ದತ್ತು ತೀರಿಕೊಂಡಿರುತ್ತಾನೆ ದೀನಕರ ಜೀವಂತ ಇರುತ್ತಾನೆ.  ಕಸ್ತೂರಿಬಾಯಿು ಇವಳ ಅಣ್ಣ ದಿನಕರ ಇರುತ್ತಾನೆ ಅಂದರೆ ಸರಿ . ನನಗೆ ಸೈಯಾಜಿರಾವ ಪರಿಚಯ ಇದ್ದರು ಸಹ

ಪರಿಚಯ ಇಲ್ಲ ಅಂತ ಸುಳ್ಳು ಸಾಕ್ಷಿ ನುಡಿದಿರುತ್ತೆನೆಂದರೆ ಸಾಕ್ಷಿಯು ಪರಿಚಯಇರುತ್ತಾರೆ ಅಂತ ಹೇಳುತ್ತಾರೆ.

ಕಸ್ತೂರಿಬಾಯಿಯು ಇವಳು ಸೈಯಾಜಿರಾವ ಮಗಳು ಅಂದರೆ ಸರಿ ಆದರೆ ನನ್ನ ಹೆಂಡತಿ ಅಲ್ಲ. ಕಸ್ತೂರಿಬಾಯಿ ಮತ್ತು ನನ್ನ ಮಗಳೇ ವಾದಿ ರೇವತಬಾಯಿ ಅಂದರೆ ಸರಿಯಲ್ಲ. ರೇವತಾಬಾಯಿ ನನ್ನ ಮಗಳು ಅಂತ ದಾವೆ ಹಾಕಿದ್ದಾರೆ ಅಂದರೆ ಸರಿಯಲ್ಲ.

ವಾದಿ ರೇವತಬಾಯಿ ಇವಳು ಕಸ್ತೂರಿಬಾಯಿ ಮತ್ತು ನನ್ನ ಮಗಳು ಅಂತ ದಾವೆ ಹಾಕಿದ್ದಿರಾ ಅಂದರೆ ಸಾಕ್ಷಿಯು ಕಸ್ತೂರಿಬಾಯಿ ನನ್ನ ಹೆಂಡತಿ ಅಲ್ಲ ಅಂತ ಹೇಳುತ್ತಾರೆ. ವಾದಿ ರೇವತಬಾಯಿಯ ರಕ್ತ ಮತ್ತು ವಂಶಾವಳಿಯು ನನ್ನದೇ ಮತ್ತು ಕಸ್ತೂರಿಬಾಯಿಯದು ಇರುತ್ತದೆ ಅಂದರೆ ಸರಿಯಲ್ಲ. ವಾದಿ ನಂಬರ 1 ರೇವತಬಾಯಿ ಇವಳು ನನ್ನ ಮಗಳು ಅಂತ ಡಿ.ಎನ.ಎ ಮಾಡಿಸಿಕೊಳ್ಳಲು ತಯಾರು ಇರುತ್ತಾಳೆ ಅದೇರೀತಿ ನೀನು ತಯಾರಿದ್ದಿಯಾ ಅಂದರೆ ಸಾಕ್ಷಿಯು ನಾನು ತಯಾರಿದ್ದೆನೆ ಅಂತ ಹೇಳುತ್ತಾರೆ. ನ್ಯಾಯಾಲಯದ ಮುಂದೆ ತನ್ನ ಡಿಎನಎ ಸ್ಯಾಂಪಲ ಮಾಡಿಕೊಳ್ಳಲು ವಾದಿ ತಯಾರಿದ್ದು ನೀನು ತಯಾರಿದ್ದಿಯಾ ಅಂದರೆ ಸಾಕ್ಷಿಯು ತಯಾರಿದ್ದೆನೆ ಅಂತ ಹೇಳುತ್ತಾರೆ.

ವೈದ್ಯರು ಡಿ.ಎನ.ಎ ರಿಪೋರ್ಟ ನೀಡಿದರೆ ನಾನು ಸ್ವಿಕರಿಸಲು ತಯಾರಿದ್ದೆನೆ. ರೇವತಬಾಯಿ ಇವಳು ನನ್ನ ಮಗಳು ಅಲ್ಲ ಅಂತ ನನ್ನ ಮಗ ರಾಮ ಇತನು ಮುಖ್ಯ ವಿಚಾರಣೆ ಸಲ್ಲಿಸಿರುತ್ತಾನೆ ಅಂದರೆ ಸಾಕ್ಷಿಯು ನನ್ನ ಮಗ ನನಗೆ ಆ ಬಗ್ಗೆ ಹೇಳಿಲ್ಲ ಅಂತ ಹೇಳುತ್ತಾರೆ. ರೇವತಬಾಯಿ ಮಗಳು ಅಲ್ಲ ಕಸ್ತೂರಿಬಾಯಿ ಹೆಂಡತಿ ಅಲ್ಲ ಅಂತ ನನ್ನ ಮಗ ರಾಮ ನನಗೆ ಹೇಳಲು ಹೇಳಿರುತ್ತೆನೆ ಅಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲು ಕಾಲವಕಾಶ ಕೊರಿದ್ದು ಮುಂದೂಡಲಾಯಿತು.

(ನನ್ನ ಉಕ್ತ ಲೇಖನದ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಮೇಲೆ ಟೈಪ್ / ಪ್ರಿಂಟ್ ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಭಾಲ್ಕಿ